ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು

# ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ

**PILIKULA DVELOPMENT AUTHORITY, MANGALURU**

# PILIKULA REGIONAL SCIENCE CENTRE

**ವರದಿ**

## ಪ್ರೌಢ ಶಾಲಾ ಶಿಕ್ಷಕರಿಗೆ ವಿಜ್ಞಾನ ಮತ್ತು ಗಣಿತ ಉನ್ನತೀಕರಣ ಕಾರ್ಯಾಗಾರ

ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ದಿನಾಂಕ 11.09.2023 ಮತ್ತು 12.09.2023ರಂದು ಎರಡು ದಿನಗಳ ವಿಷಯ ಉನ್ನತೀಕರಣ ಕಾರ್ಯಾಗಾರವನ್ನು ದ. ಕ. ಜಿಲ್ಲೆಯ ವಲಯ ಮಟ್ಟದಿಂದ ಆಯ್ದ ಪ್ರೌಢಶಾಲಾ ಗಣಿತ ಮತ್ತು ವಿಜ್ಞಾನ ಶಿಕ್ಷಕರಿಗೆ ಜಿಲ್ಲಾ ಶಾಲಾ ಶಿಕ್ಷಣ ಇಲಾಖೆ ಹಾಗೂ ಪ್ರೌಢ ಶಾಲಾ ಶಿಕ್ಷಕರ ಸಂಘದ ಸಹಯೋಗದೊಂದಿಗೆ ಆಯೋಜಿಸಲಾಗಿತ್ತು. ಜಿಲ್ಲೆಯ ಎಸ್.ಎಸ್.ಎಲ್.ಸಿ. ಪರೀಕ್ಷೆ ಫಲಿತಾಂಶ ಉನ್ನತೀಕರಣ ಮತ್ತು ವಿಷಯ ಸಂಪದೀಕರಣ ಅಂಶಗಳ ಕುರಿತು ಸಂವಹನ, ವಿಚಾರ ವಿನಿಮಯ ಹಾಗೂ ಸಂಬಂಧಿತ ಪ್ರಾತ್ಯಕ್ಷಿಕೆಗಳನ್ನು ಮಾಡಿ ತೋರಿಸುವುದು ನಂತರ ವಲಯ ಮಟ್ಟದಲ್ಲಿ ಈ ಶಿಕ್ಷಕರು ಉಳಿದವರನ್ನು ತರಬೇತಿಗೊಳಿಸುವುದು ಇದರ ಉದ್ದೇಶವಾಗಿತ್ತು.



ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ರಾಜಲಕ್ಷ್ಮಿ ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು, ಡಯಟ್, ದ. ಕ. ಮಂಗಳೂರು ನೆರವೇರಿಸಿ ಮಾತನಾಡುತ್ತಾ ಇಂತಹ ಕಾರ್ಯಾಗಾರಗಳು ನಮ್ಮ ಜಿಲ್ಲೆಯ ಎಸ್.ಎಸ್.ಎಲ್.ಸಿ. ಪರೀಕ್ಷೆ ಫಲಿತಾಂಶ ಉನ್ನತೀಕರಣ ಹಾಗೂ ಶೈಕ್ಷಣಿಕ ಗುಣಮಟ್ಟ ಎತ್ತರಿಸಲು ಸಹಾಯಕವಾಗುತ್ತವೆ. ಈ ಎರಡು ದಿನಗಳ ಅನುಭವವನ್ನು ಅಧ್ಯಾಪಕರು ತಮ್ಮ ಶಾಲೆಯಲ್ಲಿ ಉಪಯೋಗಿಸಿ ಉತ್ತಮ ಫಲಿತಾಂಶವನ್ನು ನೀಡಲು ಸಹಕರಿಸುವಂತೆ ಕರೆ ಕೊಟ್ಟರು. ಅತಿಥಿಗಳಾಗಿ ಭಾಗವಹಿಸಿದ ಶ್ರೀ ಈಶ್ವರ್ ಹೆಚ್. ಆರ್., ಕ್ಷೇತ್ರ ಶಿಕ್ಷಣಾಧಿಕಾರಿ, ಮಂಗಳೂರು ದಕ್ಷಿಣ, ಈ ಸಲ ನಮ್ಮ ಜಿಲ್ಲೆ ಎಸ್.ಎಸ್.ಎಲ್.ಸಿ. ಪರೀಕ್ಷೆ ಫಲಿತಾಂಶದಲ್ಲಿ ಮೊದಲ ಸ್ಥಾನಕ್ಕೇರಲು ಎಲ್ಲಾ ಪ್ರಯತ್ನಗಳನ್ನು ಮಾಡೋಣ, ಫಲಿತಾಂಶ ಉತ್ತಮ ಪಡಿಸಲು ಇಲಾಖೆ ಸಹಕಾರ ನೀಡುವುದು ಎಂದು ಭರವಸೆ ಇತ್ತರು. ಡಾ. ಕೆ. ವಿ. ರಾವ್ ಅಧ್ಯಕ್ಷತೆ ವಹಿಸಿ ಹೊಸ ಹೊಸ ವಿಷಯಗಳನ್ನು ಕಲಿತು ಮಕ್ಕಳಿಗೆ ಬೋಧಿಸಿ ಆದರ್ಶ ಶಿಕ್ಷಕರಾಗಬೇಕೆಂದರು.

ಶ್ರೀ ಮೊಹಮದ್ ರಿಯಾಜ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘ (ರಿ), ಬೆಂಗಳೂರು, ದ. ಕ. ಜಿಲ್ಲಾ ಘಟಕ, ಶ್ರೀಮತಿ ಶೋಭಾ, ಗಣಿತ ವಿಷಯ ಪರಿವೀಕ್ಷಕರು, ಉಪನಿರ್ದೇಶಕರ ಕಛೇರಿ(ಆಡಳಿತ), ದ. ಕ. ಮಂಗಳೂರು, ಶ್ರೀ ಮಾರ್ಕ್ ಮೆಂಡೊನ್ಸಾ, ಕಾರ್ಯದರ್ಶಿ, ಕರ್ನಾಟಕ ರಾಜ್ಯ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘ (ರಿ), ಬೆಂಗಳೂರು, ದ. ಕ. ಜಿಲ್ಲಾ ಘಟಕ,

ಶ್ರೀ ಪ್ರಕಾಶ್ ಬಾಳಿಗ, ಅಧ್ಯಕ್ಷರು, ರೋಟರಿ ಕ್ಲಬ್, ಬಂಟ್ವಾಳ ಉಪಸ್ಥಿತರಿದ್ದರು. ಶ್ರೀ ವಾಸುದೇವ್ ರಾವ್ ಸ್ವಾಗತಿಸಿ ಪ್ರಾಸ್ತಾವಿಕನುಡಿಗಳನ್ನಾಡಿದರು. ಶ್ರೀ ರಘುನಾಥ್ ಭಟ್ ಧನ್ಯವಾದ ಸಮರ್ಪಣೆಗೈದರು. ಶ್ರೀ ಜಗನ್ನಾಥ ಕಾರ್ಯಕ್ರಮ ನಿರ್ವಹಿಸಿದರು.

ನಂತರ ನಡೆದ ಅಧಿವೇಶನಗಳಲಿ ಶ್ರೀ ವೈದ್ಯನಾಥನ್, ಮುಖ್ಯ ಶಿಕ್ಷಕರು, ಶ್ರೀ ರಾಘವೇಂದ್ರ, ವಿದ್ಯಾಪೀಠ, ಮೈಸೂರು, ಶ್ರೀಮತಿ ಶಾರದಾ, ಸಹ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಎಂ.ಸಿ. ತಳಲು, ಮೈಸೂರು, ಶ್ರೀಮತಿ ನವ್ಯ ಸಹ ಶಿಕ್ಷಕರು, ಪೂರ್ಣಪ್ರಜ್ಞ ಪದವಿಪೂರ್ವ ಕಾಲೇಜು, ಅದಮಾರು, ಶ್ರೀ ಗೋವಿಂದ್ ರಾವ್ ಸಹ ಶಿಕ್ಷಕರು, ಚೇತನಾ ಪ್ರೌಢ ಶಾಲೆ, ಬ್ರಹ್ಮಾವರ, ಶ್ರೀ ರೋಶನ್ ಪಿಂಟೊ, ಸಹ ಶಿಕ್ಷಕರು, ಕಾರ್ಮೆಲ್ ಕಾನ್ವೆಂಟ್ ಪ್ರೌಢ ಶಾಲೆ, ಮೊಡಂಕಾಪು, ಬಂಟ್ವಾಳ, ಶ್ರೀ ಸುಬ್ರಹ್ಮಣ್ಯ ಭಟ್ ಕಾಂಚನ, ಉಪ್ಪಿನಂಗಡಿ, ಶ್ರೀ ಗೋಪಾಲಕೃಷ್ಣ ಭಟ್, ಮಂಗಳೂರು, ಶ್ರೀ ವೆಂಕಟೇಶ್ ದಾಮ್ಲೆ, ಗಣಿತ ಶಿಕ್ಷಕರು, ಶ್ರೀ ರಾಮಕುಂಜೇಶ್ವರ ಪದವಿಪೂರ್ವ ಕಾಲೇಜು, ರಾಮಕುಂಜ, ಪುತ್ತೂರು ಸಂಪನ್ಮೂಲ ವ್ಯಕ್ತಿಗಳಾಗಿ ಸಹಕರಿಸಿದರು.

ಎರಡು ದಿನಗಳ ಕಾರ್ಯಕ್ರಮದ ಕೊನೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಅಧಿವೇಶನಗಳ ಕುರಿತು ಅಧ್ಯಾಪಕರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿ, ಇಂತಹ ಕಾರ್ಯಕ್ರಮಗಳು ಬದಲಾದ ಪಠ್ಯಕ್ರಮಕ್ಕೆ ಸಿದ್ಧವಾಗಲು ಉತ್ತೇಜನ ನೀಡುವುದೆಂದು ಹೇಳಿದರು.

## Science and Mathematics Workshop for High School Teachers

A two-day content enrichment workshop for high school teachers was conducted at Pilikula Regional Science Center on 11th & 12th September, 2023. It was organized for mathematics and science teachers of selected high schools from the Dakshina Kannada district in collaboration with the Dept. of Education and the High School Teachers Association. The main purpose of the training program was to improve the SSLC results; exchange of ideas and related demonstrations, examination result improvement and content enrichment aspects included. In the coming days, these trained teachers then train the rest of the teachers at the zonal level.

The two day program was inaugurated by Smt. Rajalakshmi, Deputy Director (Development) and Principal, DIET, Mangalore, in the inaugural talk she said "such workshops helps in improving the exam results of SSLC and improve the academic standards". She called upon the teachers to use the experience of these two days in their schools and cooperate to give better results. Mr. Ishwar H. BEO, Mangalore South, participated as guests; he said to make all efforts to get the first place in the SSLC exam result. He assured that the department will cooperate to improve the results. Dr. K. V. Rao presided over and said to learn new things and teach the children and become an ideal teacher.

Mr. Mohammad Riaz, President, Karnataka State High School Co-Teachers' Association, Bangalore, D. K. District Unit; Smt. Shobha, Mathematics Subject Inspector, Office of the Deputy Director (Administration), D. K. Mangaluru; Mr. Mark Mendonsa, Secretary, Karnataka State High School Co-Teachers' Association (R), Bangalore, D. K. District Unit; Shri Prakash Baliga, President, Rotary Club, Bantwala was present in the function. Welcome speech was delivered by Shri Vasudev Rao and made introductory remarks. Shri Raghunath Bhat proposed the vote of thanks. Shri Jagannath hosted the program.

In the followed sessions Mr. Vaidyanathan, Head Master, Sri Raghavendra, Vidyapeeth, Mysore; Mrs. Sharada, Associate Teacher, Government High School, M.C. Talalu, Mysore; Mrs. Navya, Associate Teacher, Purnaprajna High School, Adamaru; Shri Govind Rao, Associate Teacher, Chetana High School, Brahmavar; Mr. Roshan Pinto, Associate Teacher, Carmel Convent High School, Modankapu, Bantwala; Mr. Subrahmanya Bhat Kanchana, Uppinangadi; Mr. Gopalakrishna Bhat, Mangalore and Mr. Venkatesh Damle, Mathematics Teacher, Sri. Ramakunjeswara PU College, Ramakunja, Puttur were present as resource persons.

At the closing ceremony held at the end of the two-day programme, the teachers expressed their views on the sessions and said that such programs encourage preparation for the changed curriculum.









